ಮಟ್ಟಕ್ಕೆ ಬರುವುದಕ್ಕೆ 2–3 ತಿಂಗಳುಗಳ ಕಾಲ ಹಿಡಿಯುತ್ತದೆ. ಆ ಮೂರು ತಿಂಗಳಿನ ಅವಧಿಯಲ್ಲಿ ರೈತನಿಗೆ ತೊಂದರೆಯಾಗುತ್ತದೆ. ಅದಕ್ಕಾಗಿ ಇಂತಹ ಯೋಜನೆಯನ್ನು ಮಾಡುವಾಗ ಇದಕ್ಕಾಗಿ ಒಂದು ಅವರ್ತನಿಧಿಯನ್ನಿಟ್ಟು immediate ಆಗಿ ಹಣವನ್ನು ಬಿಡುಗಡೆ ಮಾಡುವಂತಹ ವ್ಯವಸ್ಥೆಗಳು ಆಗಬೇಕಾಗಿತ್ತು. ಅದನ್ನು ಮಾಡಲಿಲ್ಲ. ಈಗ ನಮ್ಮ ಮುಂದೆ 70 ಕೋಟಿ ರೂಪಾಯಿಗಳ pending bills ಬಂದಿದೆ. ಆ ಹಣವನ್ನು ಬಿಡುಗಡೆ ಮಾಡಿ ಮತ್ತು ಇನ್ನೂ ಸುಮಾರು 400 ಕೋಟಿ ರೂಪಾಯಿಗಳು pipeline ನಲ್ಲಿ floating ನಲ್ಲಿದೆ. ಅದು correspondence ಬಂದು ನಮಗೆ reach ಆಗುವುದರೊಳಗೆ ಬಿಡುಗಡೆ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸೂಚನೆ ಕೊಟ್ಟಿದ್ದಾರೆ.

ಅಧ್ಯಕ್ಷರು : ಮಾನ್ಯ ಸಚಿವರೆ, ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ನಾವು ಹಳ್ಳಿಗಳಿಗೆ ಹೋದಾಗಲೆಲ್ಲಾ ಹಣವು ಅವರ account ಜಮಾ ಆಗದೆ ಇರುವುದರಿಂದ ಪಾಪ ಅವರಿಗೆ crop loan ಸಿಗುತ್ತಿಲ್ಲ. ಅವರಿಗೆ crop loan ಸಿಗುವುದಕ್ಕೆ ಅವಕಾಶವನ್ನು ಮಾಡಿಕೋಡಿ. ಈಗ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾನ್ಯ ರಮೇಶ್ ಕುಮಾರ್‌ರವರೆ, ತಾವು ಮಾತನಾಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಘನತೆವೆತ್ತ ರಾಜ್ಯಪಾಲರು....

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಕೆಪಿಎಸ್‌ಸಿ ವಿಚಾರದಲ್ಲಿ ಬೆಳಕು ಚೆಲ್ಲುತ್ತಿದ್ದಾರೆ. ಮಾನ್ಯ ರಮೇಶ್ ಕುಮಾರ್‌ರವರೆ, ತಾವು ಒಂದು ನಿಮಿಷ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಮಾತನಾಡಿ.

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ : ಕೆಪಿಎಸ್‌ಸಿ ನೇಮಕಾತಿ ಸಂದರ್ಶನದಲ್ಲಿ ನಡೆದಿರುವ ಅವ್ಯವಹಾರದ ಕುರಿತು

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾನಾಯಕರ, ಇಲ್ಲಿ ಪ್ರಶ್ನೆ ಇರುವಂತಹದ್ದು

ಇತ್ತೀಚೆಗೆ ಕೆ.ಪಿ.ಎಸ್.ಸಿ. ಯಲ್ಲಿ ನೇಮಕಾತಿ ಆಗುವಂತಹ ವಿಷಯದಲ್ಲಿ ಹಲವಾರು ರೀತಿಯ ಲೇಖನಗಳು ಯಾರೋ ಪತ್ರಿಕೆಗಳಿಗೆ ಹೋಗಿ ಕೊಡತಕ್ಕಂತಹದ್ದು ಮಾಧ್ಯಮಗಳು ಅದನ್ನೆ ಇವತ್ತು ಬೃಹದಾಕರಿಸಿ ಬರೆಯುತ್ತಿರುವುದು ನಡೆಯುತ್ತಿದೆ. ಲೋಕಸೇವಾ ಆಯೋಗದಲ್ಲಿ ಇರತಕ್ಕಂತಹ ಸದಸ್ಯರು constitutional body ಆಗಿ ಕೆಲಸ ಮಾಡುತ್ತಾರೆ. Executive Officer ಆಗಿ ಸರ್ಕಾರದಿಂದ ಕೆಪಿಎಸ್‌ಸಿ ಕಛೇರಿಗೆ 4–5 ಜನರ ಲಿಸ್ಟ್ ಅನ್ನು ಅನ್ನು ಕೊಟ್ಟು ನೇಮಕ ಮಾಡುವುದು ಏನಿದೆ ಅದು ರಾಜ್ಯ ಪಾಲರಿಂದ ರಾಜ್ಯ ಸರ್ಕಾರದ ಒಬ್ಬ IAS ಅಧಿಕಾರಿಯನ್ನು secretary ಆಗಿ ಹಾಕತಕ್ಕಂತಹದ್ದು ಒಂದು ಪ್ರತೀತಿ ಇದೆ. ಇದು ನಡೆದುಕೊಂಡುಬಂದಿರುವಂತಹ ನಿಯಮಾವಳಿಗಳು. ಇಲ್ಲಿ ಇವತ್ತು ಪ್ರಶ್ನೆ ಏನೆಂದರೆ, ಈ ಒಂದು ಪರೀಕ್ಷೆಯನ್ನು ಒಂದು preliminary ಹಂತದಲ್ಲಿ ನಡೆಯುವಂತಹ ಪರೀಕ್ಷೆ ಇನ್ನೊಂದು main exam ಮಾಡುವಂತಹದ್ದು ವ್ಯವಸ್ಥೆ ಇದೆ. ಇವತ್ತು ಸುಮಾರು 400–450 marksಗೆ preliminary exam ಅನ್ನು ನಡೆಸುತ್ತಾರೆ. 1:20 ratioದಲ್ಲಿ main exam ಗೆ ಏನು ಅವಕಾಶವನ್ನು ಕಲ್ಪಿಸಿಕೊಡುತ್ತಾರೆ, ಈ exam ಅನ್ನು conduct ಮಾಡುವುದು question paper prepare ಮಾಡುವುದು ಎಲ್ಲಾ powers ಇರುವುದು membersಗೆ ಅಲ್ಲ. ಇಲ್ಲಿ ಆ ಅಧಿಕಾರ Secretary ಯವರಿಗೆ ಇರುತ್ತದೆ. ಇಲ್ಲಿ ಪ್ರತಿಯೊಂದು ಆಗುಹೋಗುಗಳನ್ನು ನೋಡುವುದು, even ಮೌಖಿಕವಾಗಿ marks ಅನ್ನು ಹಾಕುವುದು ಏನು ಇದೆ ಅಲ್ಲಿ ಅದರ ಬಗ್ಗೆ ಒಬ್ಬೊಬ್ಬ ಸದಸ್ಯರು ಒಂದೊಂದು ತೀರ್ಮಾನವನ್ನು ತೆಗೆದುಕೊಂಡಿರುತ್ತಾರೆ. ಇಲ್ಲಿ ಯಾರೋ ಒಬ್ಬ ಸದಸ್ಯ ಸಂಪೂರ್ಣವಾದ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇದು ಅಂತಿಮವಾಗಿ ಆ ಮೌಖಿಕ ಪರೀಕ್ಷೆಯಲ್ಲೂ marks ಅನ್ನು ಸಂಪೂರ್ಣವಾಗಿ tally ಮಾಡಿ ಎಲ್ಲದರ ಬಗ್ಗೆ ಅಂತಿಮವಾಗಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದು ಆ Secretary ಯವರ ಕೆಲಸ ಏನು ಇರುತ್ತದೆ. ಇಲ್ಲಿ ಅವರದ್ದೇ main ಅಧಿಕಾರ ಇರುತ್ತದೆ. ಇಲ್ಲಿ ನಾನು ಓದಿದಂತಹ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ ಏಕೆಂದರೆ ನೀವೂ short ಆಗಿ ಹೇಳಿದರೆ ಒಳ್ಳೆಯದು ಎಂದು ಹೇಳಿದ್ದೀರಿ. ಅದರ ಹಿನ್ನೆಲೆಯಲ್ಲಿ

ಹೇಳುತ್ತಿದ್ದೇನೆ "Those who had not written examination at all have been selected and are serving officers now."ಎನ್ನುವಂತಹ ಮಾಹಿತಿಯನ್ನು ಪತ್ರಿಕೆಯಲ್ಲಿ ಬರೆದಿದ್ದಾರೆ. ಸಿ.ಓ.ಡಿಯವರು ಯಾವುದೋ ಒಂದು ಹಿಂದಿನ ಪ್ರಕರಣದಲ್ಲಿ ಇವತ್ತು ಆ ರೀತಿಯಾಗಿ ಕಂಡುಹಿಡಿದಿದ್ದಾರೆ. ಎನ್ನುವಂತಹದ್ದು ಇದೆ. ಇಲ್ಲಿ ಪ್ರಶ್ನೆ ಏನೆಂದರೆ ಇವತ್ತು examಅನ್ನು ಬರೆಯದೆ appointment ಆಗಿ Gazetted officer ಆಗಿ ಕೆಲಸವನ್ನು ಮಾಡುತ್ತಿದ್ದಾರೆಂದರೆ ಆ ವ್ಯಕ್ತಿ ಯಾರು? ಈಗ ಸಿಓಡಿಯವರೆ report ಕೊಟ್ಟಿದ್ದಾರೆ. ಪತ್ರಿಕೆಯಲ್ಲಿ ಬರೆದಿರುವಂತಹ ರೀತಿಯಲ್ಲಿ ಮೊದಲು ಆ Gazetted officer ಯಾರು ಇದ್ದಾನೆ ಅವನನ್ನು arrest ಮಾಡಬೇಕು. ಅವನು exam ಅನ್ನು ಬರೆಯದೆ ಕೆಲಸ ಮಾಡುತ್ತಾನೆಂದರೆ ಅವನು ಅಲ್ಲಿಯ ಸಂಸ್ಥೆ ಮತ್ತು ಸರ್ಕಾರಕ್ಕಿಂತ ದೊಡ್ಡವನೇ? ಇಲ್ಲಿ ಪ್ರತಿಯೊಂದು ಆಗುಹೋಗುಗಳನ್ನು ನೋಡುವುದು Secretary ಯ ಅಧಿಕಾರ ನಮ್ಮ ಸಭಾನಾಯಕರ ಕಛೇರಿಯಲ್ಲಿಯೇ ಇವತ್ತು ನಮ್ಮ ಈಗಿನ Secretary ಯಾರು ಇದ್ದಾರೆ. ಶ್ರೀನಿವಾಸ್‌ರವರು ಅವರು ಕೆಪಿಎಸ್‌ಸಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದಾರೆ. ಮತ್ತೊಬ್ಬರಾದ ಶ್ರೀ ರಾಮಪ್ರಸಾದ್ ಎಂಬುವವರು Governor ಹತ್ತಿರ Secretary ಆಗಿ ಕೆಲಸವನ್ನು ಮಾಡುತ್ತಿದ್ದಾರೆ. ಇನ್ನೊಬ್ಬರು ಆಹಾರ ಇಲಾಖೆಯಲ್ಲಿ ಇದ್ದರು. ಅವರು ಒಬ್ಬರು Secretary ಆಗಿ ಕೆಲಸ ಮಾಡಿದ್ದಾರೆ. ಈಗ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿರುವುದು ಮಾಧ್ಯಮಗಳ ಮುಂದೆ ಹೋಗಿ ಇವತ್ತು ಯಾರೋ ಒಬ್ಬರು ಏನು ಹೇಳಿದ್ದಾರೆಂದರೆ ಒಬ್ಬ Broker ಬಂದು ನನಗೆ ಯಾವುದೋ ಒಂದು ಕುಟುಂಬದಲ್ಲಿ ನೀನು ಮದುವೆ ಆಗುವುದಾದರೆ ನಿನಗೆ ಕೆಪಿಎಸ್‌ಸಿ ಯಲ್ಲಿ selection ಮಾಡಿಸುತ್ತೇನೆ. ಇವತ್ತು ನೀನು ಮದುವೆಯಾದರೆ ಅವರು ಏನು 80 ಲಕ್ಷ ಅಥವಾ 1 ಕೋಟಿ ರೂ.ಗಳನ್ನು ಕೇಳುತ್ತಿದ್ದಾರೆ. ನಾವು ಆ amount ಅನ್ನು ಕೊಡುತ್ತೇವೆ ಈರೀತಿಯಾದಂತಹ ಹೇಳಿಕೆಗಳು ಮಾಧ್ಯಮದಲ್ಲಿ ಬರುತ್ತಿದೆ. ಇದರ ಬಗ್ಗೆ ತನಿಖೆಯನ್ನು ನಡೆಸುವುದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುವುದಾದರೆ ನಮ್ಮ ಪ್ರಜಾವಾಣಿಯ ಪತ್ರಿಕೆಯಲ್ಲಿ ಬಹುಶಃ Advocate General ರವರು ಕೊಟ್ಟಿರುವಂತಹ ಒಂದು ನೋಟ್

ವರದಿಯಾಗಿದೆ. ಇವತ್ತು ಸರ್ಕಾರವು ಕೆಪಿಎಸ್‌ಸಿ ಅಕ್ರಮ ತನಿಖೆಗೆ ನಿರ್ಧಾರ ಎನ್ನುವುದು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವುದನ್ನೂ ಸಹ ನೋಡಿದ್ದೇನೆ. ಅವರು ಇಲ್ಲಿ detail ಆಗಿ ಕೊಟ್ಟಿದ್ದಾರೆ. ಕೆಪಿಎಸ್‌ಸಿಯಲ್ಲಿ ನಡೆದಿರುವಂತಹ ಯಾವುದಾದರು ಘಟನೆಗಳು ಇದ್ದರೆ ಅದು Secretary ಯವರ ಗಮನಕ್ಕೆ ಬಂದಿದ್ದರೆ Secretaryಯವರು KPSCಯ ಸದಸ್ಯರುಗಳ ಜೊತೆಯಲ್ಲಿ ಚರ್ಚೆ ಮಾಡಿ ಅದರಲ್ಲಿ ಆಗಿರುವಂತಹ ತಪ್ಪುಗಳನ್ನು ಅವರ ಗಮನಕ್ಕೆ ತರಬೇಕು. ಈ ಬಗ್ಗೆ Secretaryಯವರು ಗಮನಕ್ಕೆ ತಂದ ಮೇಲೂ ಆ ಕೆಪಿಎಸ್‌ಸಿ member ಗಳು ಸರಿಯಾಗಿ ನಡೆದುಕೊಳ್ಳದೆ ಹಟದರೆ ಆಗ ಅದನ್ನು ಸರ್ಕಾರದ ಗಮನಕ್ಕೆ ತಂದು ತನಿಖೆಯನ್ನು ನಡೆಸಬೇಕು ಇಲ್ಲಾ Governor ಕಳುಹಿಸಿ Governor ರವರಿಂದ ಅದು ರಾಷ್ಟ್ರಪತಿಗಳಿಗೆ ಹೋಗಿ ರಾಷ್ಟ್ರಪತಿಗಳಿಂದ ಸುಪ್ರೀಂ ಕೋರ್ಟಿನ ಜಡ್ಜ್ ನಿಂದ ತನಿಖೆಯನ್ನು ನಡೆಸುವುದು ಕೆಪಿಎಸ್‌ಸಿ ನಿಯಮಾವಳಿಗಳಲ್ಲಿ ಈ ರೀತಿಯ guidelines ಇದೆ. ಈ ಒಂದು ಸಂದರ್ಭದಲ್ಲಿ ಮಾಧ್ಯಮದಲ್ಲಿ ಇದನ್ನೇ ದೊಡ್ಡದಾಗಿ ವೈಭವೀಕರಿಸುವುದು ಏನಿದೆ ಅಧ್ಯಕ್ಷರೆ? ಬಹುಶಃ ಇಲ್ಲಿ ಯಾರೋ ಒಬ್ಬರು selection ಆಗಲಿಲ್ಲವೆಂದು ಇವತ್ತು ಅವರು ಕೊಡುತ್ತಿರುವಂತಹ ಮಾಹಿತಿಗಳನ್ನೇ ಕೆಲವು ಮಾಧ್ಯಮಗಳು ವ್ಯವಸ್ಥಿತವಾಗಿ ಆ ಒಂದು ಸಂಸ್ಥೆಯನ್ನು ಹಾಳುಮಾಡುವುದಕ್ಕಾಗಿ ಮಾಡುತ್ತಿದ್ದಾರೆಯೇ? ಇಲ್ಲಾ ಅವರ ಹತ್ತಿರ ಸಾಕ್ಷಿಗಳನ್ನಿಟ್ಟುಕೊಂಡು ಇದನ್ನೆಲ್ಲಾ ಬರೆಯುತ್ತಿದ್ದಾರೆಯೋ? ಈ ರೀತಿಯಾದರೆ ಆ ಸಂಸ್ಥೆಯ ಪರಿಸ್ಥಿತಿಯು ಏನಾಗಬೇಕು? ನಾನು ಮುಖ್ಯಮಂತ್ರಿಗಳಿಗೆ ಹೇಳುವುದೇನೆಂದರೆ, ಅಲ್ಲಿ ಯಾರು Secretary ಯವರು Executive Officer ಆಗಿ ಕೆಲಸ ನಿರ್ವಹಿಸುತ್ತಾರೆ ಇವತ್ತು ಅವರುಗಳಿಗೆ ಏನು ಅಧಿಕಾರ ಇದೆ ಇಲ್ಲಿ ಅವರೇ head ಇರುತ್ತಾರೆ. ಇಲ್ಲಿ marks ಅನ್ನು ಹಾಕಿದ ಮೇಲೆ ಅದನ್ನು ಸಂಪೂರ್ಣವಾಗಿ Secretary ಯವರಿಗೆ ಕಳುಹಿಸುತ್ತಾರೆ. ಅವರು ಅದನ್ನು ಕ್ರೂಢೀಕರಿಸಿ ಸಾಂಯಕಾಲ announce ಮಾಡುತ್ತಾರೆ. ಇದನ್ನು member ಮಾಡುವುದಿಲ್ಲ. ಇಲ್ಲಿ ಪ್ರಶ್ನೆ ಏನೆಂದರೆ, ಮದುವೆಗಳು ಮಗದೊಂದು ಅದಕ್ಕಾಗಿ ಈ ರೀತಿಯಾಗಿ influence ನಡೆಯುತ್ತಿದೆ. ಈ ರೀತಿಯಾದ ವಾತಾವರಣ ಏನು create ಆಗಿದೆ ಇವತ್ತು ಆ ಸಂಸ್ಥೆಯ ಬಗ್ಗೆ

ಜನರಲ್ಲಿ ಅಪನಂಬಿಕೆ ಮೂಡವಂತಹದ್ದು ಏನು ಇದೆ ಇವತ್ತು ಕೆಲವರು ನಾನು 1040 ಮಾರ್ಕ್ಸ್ ತೆಗೆದಿದ್ದೇವೆ, 1100 ಮಾರ್ಕ್ಸ್ ತೆಗೆದಿದ್ದೆವು, ಇಲ್ಲಿ ನಮ್ಮನ್ನು ಆಯ್ಕೆ ಮಾಡಲಿಲ್ಲ. ಇವತ್ತು ಯಾವುದೋ influence ಆಯಿತು. ಎಂದು ಇದರ ಬಗ್ಗೆ ಮಾಧ್ಯಮಗಳ ಮುಂದೆ ಹೋಗುವಂತಹದ್ದು ಒಂದು ವಾತಾವರಣವನ್ನು – ಮಾಡಿಕೊಂಡಿದ್ದಾರೆ. ಬಹುಶಃ ಅಧ್ಯಕ್ಷರೆ, ನಾನು ಒಂದು ಉದಾಹರಣೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಕೆ.ಆರ್. ರಮೇಶ್ ಕುಮಾರ್‌ರವರು ಆ ಜಾಗದಲ್ಲಿ ಕುಳಿತಿದ್ದಾಗ ಆದ ಅನುಭವದ ಬಗ್ಗೆ ಮಾತನಾಡಿ , ಅಲ್ಲಿ ಎದುರುಗಡೆ ಬಾಗಿಲು ಏನಿದೆ ಆ ಬಾಗಿಲಿನಿಂದ ಕೆಲವು ಶಾಸಕರು ಒಳಗೆ ಬರಬೇಕಾದರೆ ಅವರು ನಡೆದುಕೊಂಡು ಬರುವಂತಹ action ಗಳನ್ನು ನೋಡಿದರೆ ಅವರು ಅಲ್ಲಿಂದ ನೇರವಾಗಿ ನಮಗೆ ಹೊಡೆಯುವುದಕ್ಕೆ ಬರುತ್ತಿದ್ದಾರೆನ್ನುವಂತಹ ರೀತಿಯಲ್ಲಿ ಭಯವಾಗುವಂತಹ ಒಂದು ಮಾತಾವರಣವನ್ನು ಕಲ್ಪಿಸಿಕೊಂಡು ಆ ರೀತಿ ನಡೆದು ಬರುವವರನ್ನು ಸದನದ ಒಳಗಡೆ ಯಾವ ರೀತಿಯಾಗಿ ನಡೆದುಕೊಳ್ಳಬೇಕು ಎಂಬ ತಿಳುವಳಿಕೆಯನ್ನು ಮೂಡಿಸುವಂತಹ ಮೂಡಿಸುವಂತಹ ಮಾತನ್ನು ಹೇಳಿದರು. ಇಲ್ಲಿ ಪ್ರಶ್ನೆ ಏನೆಂದರೆ main exam ನ marks ಬಗ್ಗೆ Supreme Court ಒಂದು ಆದೇಶವನ್ನು ಮಾಡಿದ್ದಾರೆ. ಇವತ್ತು ಆ ಮೆಂಬರ್‌ಗಳಿಗೆ 12.5% marks ಹಾಕುವ ಬಗ್ಗೆ discretionary powers ಇದೆ ಇವತ್ತು ಅವರು ಆ ಆಧಾರದ ಮೇಲೆ zeromarks ನಿಂದ maximum marks ಕೊಡುವುದರ ಬಗ್ಗೆ ಆ ಒಬ್ಬ ಮೆಂಬರ್ ಏನು ಇದ್ದಾರೆ ಅವರಿಗೆ ಸಂಪೂರ್ಣವಾದ ಅಧಿಕಾರವಿದೆ. ಅದನ್ನು ಯಾರೂ ಪ್ರಶ್ನೆ ಮಾಡುವ ಹಾಗಿಲ್ಲವೆನ್ನುವುದನ್ನು Supreme Court ಆದೇಶವನ್ನು ಮಾಡಿದೆ. ಇವತ್ತು interviewಗೆ ಹೋಗುವವರು ಅಲ್ಲಿ ಬಹುಶಃ ಕೆಲವು guidelines ಅನ್ನು ಇಟ್ಟುಕೊಂಡಿದ್ದಾರೆ. ಆ ಒಂದು ಸಂಸ್ಥೆಯಲ್ಲಿ ಆಯ್ಕೆ ಮಾಡಬೇಕಾದರೆ ಆ ಒಂದು guidelines ಏನಿದೆ ಎಂದರೆ, "the qualities to be judged at the time of personallty test are mental alertness, critical powers of accumulation, clear and logical exposition, balance of judgment, variety and depth of interest, ability

for social cohesions , leadership and intellectual depth of the candidate." ಇದೆಲ್ಲವನ್ನು ಅವನು ಲೆಕ್ಕಚಾರ ಮಾಡುತ್ತಾರೆ. ಅವರು ಸಂದರ್ಶನಕ್ಕೆ enter ಆಗಬೇಕಾದರೆ ಅವನು ಯಾವ ರೀತಿಯಾಗಿ ಒಳಗಡೆಗೆ ಬರುತ್ತಾನೆ ಶರ್ಟ್‌ನ ಮೇಲಿನ ಗುಂಡಿಯನ್ನು ಹಾಕಿರುತ್ತಾನೋ ಇಲ್ಲಾ ಅವರು ಕುಳಿತುಕೊಂಡಾಗ ಯಾವ ರೀತಿಯಾಗಿ ನಡೆದುಕೊಳ್ಳುತ್ತಾನೆ. ಸಂದರ್ಶನಕ್ಕೆ ಬರುವ ಅಭ್ಯರ್ಥಿಯ ಮನಸ್ಸಿನಲ್ಲಿ Social justice ಬಗ್ಗೆ ಇರುವ ಕಾಳಜಿ ಏನು? ಕೇವಲ ಪ್ರಶ್ನೆಗೆ ಉತ್ತರವನ್ನು ಕೊಡುವುದಷ್ಟೆ ಅಲ್ಲ. ಆ ರೀತಿಯ ಕೆಲವು ಗೈಡ್‌ಲೈನ್ಸ್ ಇಟ್ಟುಕೊಂಡಿದ್ದಾರೆ ಅಧ್ಯಕ್ಷರೆ ಅವರು ಹಾಕತಕ್ಕಂಥ ಅಂಕಗಳ ಬಗ್ಗೆ ನಾವು ಪ್ರಶ್ನೆ ಮಾಡಲಿಕ್ಕಾಗುವುದಿಲ್ಲ. ಇವತ್ತು ಸದನದಲ್ಲಿ ಹಲವಾರುಜನ ಹಿರಿಯರಿದ್ದೇವೆ. ನಮ್ಮ ಕ್ಷೇತ್ರದ ಜನ ಒಂದೊಂದು ಬಾರಿ ನಮ್ಮ ಹತ್ತಿರ ಬರುತ್ತಾರೆ. ನಾವು ಅವರಿಗೆ ಏನಾದರೂ ಹೇಳದಿದ್ದರೆ ಅವರು ಬಿಡುವುದಿಲ್ಲ. ನಾವು ಅವರ ಹತ್ತಿರ request ಮಾಡಿರುತ್ತೇವೆ. ಹಾಗಾಗಿ ನಾವು ದುಡ್ಡು ಕೊಟ್ಟು ಕೆಲಸ ಮಾಡಿಸಿದ್ದಾರೆಂದು ಎಲ್ಲರ ಮೇಲೆಯೂ ಹೇಳಲಿಕ್ಕಾಗುವುದಿಲ್ಲ. ಇಲ್ಲಿ ಪ್ರಶ್ನೆ ಏನೆಂದರೆ, ಈ ರೀತಿ ಆ ಸಂಸ್ಥೆಯ ಬಗ್ಗೆ ನಡೆಯುತ್ತಿರುವಂಥ ಪರಿಸ್ಥಿತಿ ಏನಿದೆ ಆ ಬಗ್ಗೆ ನಾನು ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ ನಿಮ್ಮ ಕಾರ್ಯದರ್ಶಿಯವರೇ ಅಲ್ಲಿ ಕೆಲಸ ಮಾಡಿದ್ದಾರೆ ಯಾವರೀತಿಯಲ್ಲಿ ಅಲ್ಲಿ ಕೆಲಸ ನಿರ್ವಹಿಸುತ್ತಾರೆಂದು ಅವರಿಗೂ ಅನುಭವವಿದೆ. ಇವತ್ತು ಇಂಥ ಒಂದು ಪರಿಸ್ಥಿತಿಯಲ್ಲಿ ಕೆಪಿಎಸ್‌ಸಿ ಸದಸ್ಯರುಗಳಿಗಿಂತ ಹೆಚ್ಚಾಗಿ ಕಾರ್ಯದರ್ಶಿಯವರಿಗೆ ಜವಾಬ್ದಾರಿ ಇರುತ್ತದೆ. ಇಲ್ಲಿ ಆಶ್ಚರ್ಯ ಏನೆಂದರೆ ಸಿಓಡಿಯವರುವರದಿ ಕೊಟ್ಟಿದ್ದಾರೆ. Examination ಬರೆಯದಿರುವವನು ಇವತ್ತು ಗೆಜೆಟೆಡ್ ಆಫೀಸರ್ ಆಗಿ ಆಯ್ಕೆ ಮಾಡಿದ್ದಾರೆ. ಇಂಥ ವಿಷಯಗಳ ಬಗ್ಗೆ ನಮ್ಮ ಮುಖ್ಯಮಂತ್ರಿಯವರು ಆ ಕಾರ್ಯದರ್ಶಿಯವರೊಂದಿಗೆ ಚರ್ಚೆ ಮಾಡಿ ಇದು ಸತ್ಯವೋ, ಅಸತ್ಯವೋ ಕೇಳಬೇಕು. ಒಂದು ವೇಳೆ ಆ ಅಭ್ಯರ್ಥಿ ಇವತ್ತು ಪರೀಕ್ಷೆಯನ್ನು ಬರೆಯದೆ ನೇಮಕವಾಗಿದ್ದಾನೆ ಎಂದರೆ ಅವರನ್ನು ಅರೆಸ್ಟ್ ಮಾಡುಬೇಕಾಗುತ್ತದೆ. ಇಲ್ಲಿ ಪ್ರಶ್ನೆ ಏನೆಂದರೆ ಯಾವುದೋ ಒಂದೇ ಸಮಾಜಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆ ಮಾಡಿದ್ದಾರೆ. ಸದಸ್ಯರು ಅಲ್ಲಿ ಆ ರೀತಿ ಮಾಡಲಿಕ್ಕೆ ಬರುವುದಿಲ್ಲ. ಇವತ್ತು ಯಾವ ಒಂದು ಪ್ರಿಲಿಮನರಿ ಪರೀಕ್ಷೆ ಆದಮೇಲೆ 1:20 ರನುಪಾತದಲ್ಲಿ ಪರೀಕ್ಷೇಗೆ ಬರೆಯುತ್ತಾರೆ. ಅದರಲ್ಲಿ

ಬಹುಶಃ 50% General Merit ನವರಿಗೆ ಕರೆಯುತ್ತಾರೆ, ಇನ್ನುಳಿದ 50% ಬೇರೆ ಬೇರೆ ವರ್ಗದ ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲಿಕ್ಕೆ ಕರೆಯುತ್ತಾರೆ. ಇಲ್ಲಿ ಪ್ರಶ್ನೆ ಯಾವುದೋ ಒಂದು ಕಾಲದಲ್ಲಿ ಒಂದೇ ಸಮಾಜಕ್ಕೆ ಹೆಚ್ಚಿನ ಆಯ್ಕೆ ಮಾಡಿದ್ದಾರೆ. ಇಲ್ಲಿ ಆ ಸದಸ್ಯರು, ಛೇರ್ಮನ್ ಇಲ್ಲವೇ ಆ ಕಮಿಟಿ ಸಂಪೂರ್ಣವಾಗಿ ತೆಗೆದುಕೊಳ್ಳುವಂಥ ನಿರ್ಣಯಗಳೇನಾದರೂ ತೆಗೆದುಕೊಂಡರೂ ಅಲ್ಲಿನ ಕಾರ್ಯದರ್ಶಿಯವರ ಮೂಲಕ ಅಂತಿಮವಾಗಿ ಕಾರ್ಯರೂಪಕ್ಕೆ ಬರುವುದು. ಕಾರ್ಯದರ್ಶಿಯವರಿಗೇ ಅಂತಿಮವಾಗಿ powersಇರುವುದು. ಇವತ್ತು ಯಾರಾದರೂ ಆ ಒಂದು ಪರೀಕ್ಷೆಗೆ ಹೋಗಬೇಕಾದರೆ ಅವರಿಗೆ certificate ಕೊಡಬೇಕಾದರೆ ಯಾವ ಒಂದು community, sector ಗೆ ಬರುತ್ತಾರೆ. ಎಂಬುದನ್ನು ತಹಸೀಲ್ದಾರ್‌ರವರಿಂದ certificate ಪಡೆದು ಸಲ್ಲಿಸಿರುತ್ತಾರೆ. ತಹಸೀಲ್ದಾರ್ ತಪ್ಪು ಮಾಡಿದ್ದರೆ ಅಭ್ಯರ್ಥಿ ನೇಮಕವಾಗಬೇಕಾದರೆ verification ಮಾಡುವುದು ಕಮಿಟಿ ಮೆಂಬರ್ಸ್ ಅಲ್ಲ, verification ಮಾಡುವುದು ಕಾರ್ಯದರ್ಶಿಯವರ ಮಟ್ಟದಲ್ಲಿ ಆಗುತ್ತದೆ. ಆ ಇಲಾಖೆಯಲ್ಲಿ ಸುಮಾರು 15 sections ಇವೆ, ಅವರು ಅದನ್ನೆಲ್ಲಾ ನೋಡುವುದು. ಇದರಲ್ಲಿಸದಸ್ಯರಿಗೆ ಯಾವುದೇ ಜವಾಬ್ದಾರಿ ಇರುವುದಿಲ್ಲ. ಇವತ್ತು ಆ ಸಂಸ್ಥೆಯ ಮೇಲೆ ಬಂದಿರತಕ್ಕಂಥ ಅನುಮಾನಗಳು, ಆ ಸಂಸ್ಥೆ ಬಗ್ಗೆ ಇರತಕ್ಕಂಥ ಅಪನಂಬಿಕೆಗಳು ಏನಿವೆ, ಏನಾದರೂ ತಪ್ಪು ಮಾಡಿದ್ದರೆ ಆ ಬಗ್ಗೆ ತನಿಖೆ ನಡೆಸುದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ತನಿಖೆ ನಡೆಸಲಿಕ್ಕೂ ಸಹ ಈಗ ತಪ್ಪಾಗಿದೆ ಅವರಿಗೆ ಏನಾದರೂ ನಆದರೂ ತೊಂದರೆಯಾಗಿದೆ ಎನ್ನುವುದು ಇದ್ದರೆ ಮಾಧ್ಯಮಗಳು ಬರೆದಂಥ ವರದಿಯ ಮೇಲೆ ನಾವು ತನಿಖೆ ಮಾಡಲಿಕ್ಕಾಗುವುದಿಲ್ಲ. ಇವತ್ತು ತನಿಖೆ ನಡೆಸುವುದಾದರೆ ಯಾರಿಗೆ ಅನ್ಯಾಯವಾಗಿದೆ ಎಂದು ನೋಡಿ ಅವರಿಗೆ ಅನ್ಯಾಯವಾಗಿದ್ದರೆ ತಕ್ಷಣ ಅವರು ಕಾರ್ಯದರ್ಶಿಯವರಹತ್ತಿರ ಹೋಗಿ ತಿಳಿಸಬೇಕಾಗಿತ್ತು. ಅವರು ಈ ವಿಷಯವನ್ನು ಕಾರ್ಯದರ್ಶಿಯವರಿಗೆ ತಿಳಿಸಿರುವರೆ?

ಅಧ್ಯಕ್ಷರು : ಅವೆಲ್ಲಾ ತನಿಖೆ ಮಾಡಿದಾಗ ದೊರೆಯುತ್ತದಲ್ಲವೆ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾಧ್ಯಮಗಳು ಕೊಡುವಂಥ ವರದಿ ಮೇಲೆ ನೀವು ತನಿಖೆ ಮಾಡುವುದು ಅಧ್ಯಕ್ಷರೆ, ನಾಳೆ ಮಂತ್ರಿಗಳ ಮೇಲೆ

ಪತ್ರಿಕೆಯವರು ಯಾರೋ ಏನೋ ಹೇಳಿದರು ಎಂದು ಹೇಳಿ ಏನಾದರೂ ಬರೆಯುತ್ತಾರೆ. ಅದರ ಬಗ್ಗೆ ತನಿಖೆ ನಡೆಸಲಿಕ್ಕೆ ಆಗುತ್ತದೆಯೇ? ಅದರಿಂದ ಆ ಒಂದು ಸಂಸ್ಥೆ ನಡೆಯುವಂಥ ನೀತಿ ನಿಯಮಗಳೇನಿವೆ ಅದರ ಆಧಾರದ ಮೇಲೆ ಇವತ್ತು ಆ ಸಂಸ್ಥೆಯಲ್ಲಿ ಯಾವರೀತಿ ಕೆಲಸ ನಡೆಯುತ್ತಿದೆ ಎಂದು ಅವರ ಕಾರ್ಯದರ್ಶಿಯವರಿಗೆ ಅನುಭವವಿದೆ. ಬಹುಶಃ ಹಿಂದೆ ನಮ್ಮ ರಮೇಶ್ ಕುಮಾರ್‌ರವರು ಸ್ಪೀಕರ್ ಆಗಿ ಕೆಲಸ ಮಾಡಬೇಕಾದರೆ ಹಲವಾರು rulingsಅನ್ನು ಕೊಟ್ಟಿರಬಹುದು. ಆದ್ದರಿಂದ ಇವತ್ತಿನ ದಿವಸ ಕೆಲವರು appointment ಸಿಗಲಿಲ್ಲವೆಂದು ಹೇಳಿ ಪ್ರತಿನಿತ್ಯ ಮಾಧ್ಯಮಗಳಲ್ಲಿ ಕೊಡುವಂಥದ್ದನ್ನು ಹವ್ಯಾಸವನ್ನು ಮಾಡಿಕೊಂಡಿದ್ದಾರೆ. ಇದರಿಂದ ಆ ಒಂದು ಸಂಸ್ಥೆಗೆ ಅಗೌರವ ಬರತಕ್ಕಂಥ ರೀತಿಯಲ್ಲಿ ವಾತಾವರಣ ನಿರ್ಮಾಣವಾಗಬಾರದೆಂದು ಸಭಾನಾಯಕರ ಗಮನಕ್ಕೆ ಬಯಸುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ನಾವು ಒಂದು ನಿರ್ದಿಷ್ಟವಾದ ಪ್ರಕರಣದ ಬಗ್ಗೆ ಚರ್ಚೆ ಮಾಡಿದ್ದೇವೆ. ಯಾವರೀತಿ ಈ ಒಂದು ಗೆಜೆಟೆಡ್ ಹುದ್ದೆಯ ಪರೀಕ್ಷೆಗೆ ಸ್ಪರ್ಧೆ ಮಾಡಿ ಪ್ರೋಬೇಷನರಿ ಹುದ್ದೆಯ ಸಂದರ್ಶನಕ್ಕೆ ಭಾಗವಹಿಸಿದ ಒಬ್ಬ ಪರಿಶಿಷ್ಟ ಪಂಗಡಕ್ಕೆ ಸೇರಿದ ಹೆಣ್ಣುಮಗಳು ನನಗೆ ಅನ್ಯಾಯವಾಗಿದೆ ಎಂದು ಹೇಳಿದ specific case ಅನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ನಾನು ತಂದಿದ್ದೆನು. ಅವರು ನನ್ನ ಮನೆಗೆ ಬಂದು ಲಿಖಿತ ರೂಪದಲ್ಲಿ ಒಂದು ದೂರವನ್ನೂ ಸಹ ಕೊಟ್ಟಿದ್ದಾರೆ. ಅವರ ಹೆಸರು ಡಾ: ಮೈತ್ರಿ ಎಂದು. ಅವರಿಗೆ 1009 ಅಂಕಗಳು ಬಂದವು. ಇವರು Scheduled Tribeಗೆ ಸೇರಿದ ಹೆಣ್ಣುಮಗಳು. ಎರಡನೆಯವರಿಗೆ 937 ಅಂಕಗಳು ಬಂದಿತ್ತು. ಇವತ್ತೇನಾಗಿದೆ? ಈ ಹುದ್ದೆಯ ಸಂದರ್ಶನದಲ್ಲಿ 200 ಅಂಕಗಳು ಕೊಡುವುದಕ್ಕೆ ಅವಕಾಶವಿದೆ. ಇದರಿಂದ ಮೈತ್ರಿ ಎಂಬುವವರಿಗೆ 75 ಅಂಕಗಳನ್ನು ಕೊಟ್ಟರು, ಎರಡನೆಯವರಿಗೆ 150 ಅಂಕಗಳನ್ನು ಕೊಟ್ಟರು. ಹೀಗಾಗಿ ಆ ಹೆಣ್ಣುಮಗಳು ಮೊದಲನೆ ಸ್ಥಾನದಲ್ಲಿ ರ್‍ಯಾಂಕ್ ಪಡೆದುಕೊಂಡಿದ್ದರೂ ಸಹ ಅದು ತಪ್ಪಿಹೋಯಿತು. ಇದು ಒಂದು ಭಾಗ, ಎರಡನೆಯದು ಸ್ವತಃ ಕೆಪಿಎಸ್‌ಸಿ ಸದಸ್ಯರೇ ದೂರವಾಣಿ ಮೂಲಕ ಸಂಪರ್ಕ ಮಾಡಿ ಅಲ್ಲಿಗೆ ಬಂದು ಭೇಟಿ ಮಾಡಬೇಕೆಂದು ಹೇಳುವಂಥ ದೂರವಾಣಿ ನಂಬರ್ ಅನ್ನು ಕೊಟ್ಟಿದ್ದಾರೆ. ಅನ್ನು ಕೊಟ್ಟಿದ್ದಾರೆ. ಅವರು ರೆಕಾರ್ಡ್

ಮಾಡಿಕೊಂಡು ಬಂದು ಆ ದೂರವಾಣಿ ನಂಬರ್ ಅನ್ನೂ ಸಹ ತೋರಿಸಿದ್ದಾರೆ. ಇಲ್ಲಿ ಬೇರೆ ಕೇಸುಗಳಿಗೂ ಮಾನ್ಯ ವಿರೋಧ ಪಕ್ಷದ ನಾಯಕರಾದ ಕುಮಾರಸ್ವಾಮಿಯವರು ಹೇಳಿರುವ ಕೇಸಿಗೂ ವ್ಯತ್ಯಾಸವೇಂನೆಂದರೆ, ಕೆ.ಪಿ.ಎಸ್.ಸಿ. ಸದಸ್ಯರೇ ಫೋನ್ ಮಾಡಿ ಎರಡು ಮೂರು ಸಾರಿ ಹಣ ಕೊಡಬೇಕೆಂದು ಹೇಳಿ ಮತ್ತೆ ಅವರ ಪ್ರೈವೇಟ್ ಸೆಕ್ರೆಟರಿಯವರ ಬಳಿ ಕಳುಹಿಸಿ ಬೇರೆ ಕಡೆ ನಾವು 1.50 ಕೋಟಿ ರೂಪಾಯಿಗಳನ್ನು ಕೇಳುತ್ತೇವೆ, ನೀವು ಎಸ್.ಟಿ. ವರ್ಗದವರಾಗಿರುವುದರಿಂದ 75 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಸಾಕು ಎಂದು ಒತ್ತಾಯ ಮಾಡಿದ್ದಾರೆ. ಆ ಹೆಣ್ಣುಮಗಳು ಹೊರದೇಶದಿಂದ ಬಂದು ಇಲ್ಲಿ settle ಆಗಿದ್ದಾರೆ. ಅವರ ಫೋನ್ ನಂಬರ್ ಎಲ್ಲಾ ಇದೆ. ಮಾನ್ಯ ಮುಖ್ಯಮಂತ್ರಿಗಳು ಕರೆಸಿದರೆ ಗೊತ್ತಾಗುತ್ತದೆ. ತನಿಖೆ ಮಾಡಿದರೆ ಗೊತ್ತಾಗುತ್ತದೆ. ಈ specific case ದೊರೆತ ನಂತರ ನನಗೇನು ಅನ್ನಿಸುತ್ತಿದೆ ಎಂದರೆ ಕೆ.ಪಿ.ಎಸ್.ಸಿ.ಯಲ್ಲಿ ಒಂದು ರೀತಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಅಲ್ಲಿ ಅನೇಕ ಒಳ್ಳೆಯ ಸದಸ್ಯರು ಇದ್ದಾರೆ. ಅಂಕಗಳನ್ನು ಕೊಡಲಿಕ್ಕೆ ಮೂರು ಜನ ಸದಸ್ಯರು ಇರುತ್ತಾರೆ. ಒಬ್ಬೊಬ್ಬರು ಒಂದೊಂದು ರೀತಿ ಅಂಕಗಳನ್ನು ಕೊಡಲಿಕ್ಕೆ ಸ್ವಾತಂತ್ರ್ಯ ಇದೆ. ನಾನು ಮುಖ್ಯಮಂತ್ರಿಯವರಲ್ಲಿ ವಿನಂತಿಸುವುದೇನೆಂದರೆ ನಿಮ್ಮ ಕಾಲದಲ್ಲಿ ಈ ಪರೀಕ್ಷೆಯ ವ್ಯವಸ್ಥೆಯನ್ನು ಬದಲಾವಣೆ ಮಾಡಿ. ಲಿಖಿತ ಪರೀಕ್ಷೆಯ ಬಗ್ಗೆ ನಮ್ಮದೇನೂ ಮಧ್ಯೆ ಪ್ರವೇಶವಿಲ್ಲ. ಅವರು ಮೆರಿಟ್ ಮೇಲೆ answer ಮಾಡಿರುತ್ತಾರೆ ಅದಕ್ಕೆ ಅವರು ಅಂಕಗಳನ್ನು ಕೊಟ್ಟಿರುತ್ತಾರೆ. ತಪ್ಪಾಗಿದ್ದರೆ ಅದನ್ನು re-valuation ಮಾಡಿಸಬಹುದು ಅದರಲ್ಲಿ ಸತ್ಯ ಮಾಹಿತಿ ಸಿಗುತ್ತದೆ. ಆದರೆ ಇಲ್ಲಿ ಸಂದರ್ಶನ ಸಮಯದಲ್ಲಿ 200 ಅಂಕಗಳನ್ನು ಕೊಡುವಂಥದ್ದು ಏನಿದೆ ಅದು 20 ಅಂಕಗಳ ಮೇಲೆ ಕೊಡಬಾರದು. 200 ಅಂಕಗಳನ್ನು ಕೊಡುವುದರಿಂದಲೇ ಈ ಎಲ್ಲಾ ಹಗರಣಗಳು ಪ್ರಾರಂಭವಾಗಿವೆ. ಏನೂ ಬೇಡಿ ಸರ್, ಮೊನ್ನೆ ಗೆಜೆಟೆಡ್ ಹುದ್ದೆಗಳಿಗೆ ಸಂದರ್ಶನವಾಗಿದೆ. ಅಷ್ಟು ಅಂಕಗಳ ಪಟ್ಟಿಯನ್ನು ತರಿಸಿ, ಅದು ಎಲ್ಲರಿಗೂ ಸಾರ್ವಜನಿಕವಾಗಿ ಸಿಗುತ್ತದೆ. 200 ಅಂಕಗಳಲ್ಲಿ ಕೆಲವರಿಗೆ 25–30 ಅಂಕಗಳನ್ನು ಕೊಟ್ಟು ರ್ಯಾಂಕ್ ಪಡೆದವರನ್ನು ಹಿಂದೆ ಸರಿಸಿ, ಕೆಲವರಿಗೆ 160–170 ಅಂಕಗಳನ್ನು ಕೊಟ್ಟು ಅವರನ್ನು ಆಯ್ಕೆ ಮಾಡುವಂಥ ಹತ್ತಾರು ಉದಾಹರಣೆಗಳು ನಿಮಗೆ ಸಿಗುತ್ತದೆ. ನಿಮಗೆ ಮೇಲ್ನೋಟಕ್ಕೇ ಅದು

ತಿಳಿಯುತ್ತದೆ. ಹಾಗಾಗಿ ಈಗ ಆಗಿರುವಂಥ ಪರೀಕ್ಷೆಯ ಫಲಿತಾಂಶವನ್ನು announce ಮಾಡಬಾರದು, ಇದನ್ನು ತನಿಖೆ ಮಾಡಿ. Specific ಆಗಿ ಮೈತ್ರಿ ಎಂಬ ಹೆಣ್ಣುಮಗಳ ಕೇಸ್ ನಾನು ಕೊಟ್ಟಿದೇನೆ. ಕೆ.ಪಿ.ಎಸ್.ಸಿ.ಯಲ್ಲಿ ಅವರನ್ನು ಕರೆಸಿ ಮಾತನಾಡಿದ್ದಾರೆ. ಅವರ ಆಪ್ತ ಕಾರ್ಯದರ್ಶಿಯವರನ್ನು ಕಳಿಸಿ ಕೊಟ್ಟಿದ್ದಾರೆ. ಅವರ ಆಪ್ತ ಕಾರ್ಯದರ್ಶಿಯವರಿಂದ ಮೂರು ಬಾರಿ ದೂರವಾಣಿ ಮೂಲಕ ಸಂಪರ್ಕ ಮಾಡಿದ್ದಾರೆ. ಈ ರೀತಿ ಎಲ್ಲಾ ದಾಖಲೆಗಳಿರುವುದರಿಂದ ಇಂಥ ಉದಾಹರಣೆಗಳು ನಿಮಗೆ ಸಿಗುವುದಿಲ್ಲ. ಇದರಲ್ಲಿ ಎರಡು ವಿಷಯಗಳಿವೆ, ಒಬ್ಬ ಹೆಣ್ಣುಮಗಳು ಧೈರ್ಯವಾಗಿ ಬಂದು ದೂರ ಕೊಟ್ಟಿರುವುದು, ಈಗ ನನಗೆ ಅನ್ಯಾಯವಾಗಿದೆ ಎಂದು ಹೇಳುವುದಕ್ಕೆ ಯಾರೂ ಮುಂದಕ್ಕೆ ಬರುವುದಿಲ್ಲ. ಹೀಗಾಗಿ ಆ ಹೆಣ್ಣುಮಗಳಿಗೆ ನಾವು ರಕ್ಷಣೆ ಕೊಡಬೇಕಾಗಿದೆ. ಹಾಗಾಗಿ ಇದನ್ನು ಒಂದು sample ಆಗಿ ಇಟ್ಟುಕೊಂಡು ಪರೀಕ್ಷೆ ಮಾಡಿ ಆ ಸದಸ್ಯರ ಸದಸ್ಯತ್ವವನ್ನು ರದ್ದು ಮಾಡಿ.ಬೇಕಾದರೆ ಅವರು President of Indiaಗೆ ಮೊರೆ ಹೋಗಲಿ. ಕಾನೂನು ರೀತ್ಯ ಒಬ್ಬರಿಗೆ ಬರೆ ಎಳೆದರೆ ಇನ್ನು ಮುಂದೆ ಇಂಥ ಸಾಹಸ ಯಾರೂ ಮಾಡುವುದಿಲ್ಲ. ಸಂದರ್ಶನದಲ್ಲಿ 200 ಅಂಕಗಳನ್ನು ಕೊಡುವುದರ ಬದಲು ಕೊನೆಪಕ್ಷ ತತ್‌ಕ್ಷಣ 20 ರ ಮೇಲೆ ಅಂಕಗಳನ್ನು ಕೊಡಬಾರದು. ಇದನ್ನು ಏನಾದರೂ ಮಾಡಿ ಈ ಪರೀಕ್ಷಾ ಪದ್ಧತಿಯನ್ನು ಬದಲಾವಣೆ ಮಾಡದಿದ್ದರೆ ಆ ಗೆಜೆಟೆಡ್ ಹುದ್ದೆಗೆ ಆಯ್ಕೆಯಾಗುವಂಥವರು ಎರಡು ಮೂರು ಕೋಟಿ ರೂಪಾಯಿಗಳನ್ನು ಕೊಟ್ಟು ಆಯ್ಕೆಯಾಗಿ ಬಂದರೆ ಅವರಿಂದ ಪ್ರಾಮಾಣಿಕತೆಯನ್ನು ನಾವು ಹೇಗೆ ನಿರೀಕ್ಷೆ ಮಾಡಲಿಕ್ಕಾಗುತ್ತದೆ? ಆದ್ದರಿಂದ ಈ specific case ಹಿನ್ನೆಲೆಯಲ್ಲಿ ಈ result ಅನ್ನು ತಡೆ ಹಿಡಿಯಬೇಕು, announce ಮಾಡಬಾರದು. ಈ ಮೈತ್ರಿ ಎನ್ನುವವರಿಗೆ ನ್ಯಾಯ ಒದಗಿಸಿ ಕೊಡಬೇಕೆಂದು ಅಧ್ಯಕ್ಷರೆ, ತಮ್ಮ ಮೂಲಕ ಮುಖ್ಯಮಂತ್ರಿಗಳಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಸಿ.ಟಿ. ರವಿ : ಒಂದೇ ಮಾತು.

ಅಧ್ಯಕ್ಷರು : ಸಾಕು No, No. ಆಮೇಲೆ ಹೇಳಿ.

ಶ್ರೀ ಸಿ.ಟಿ. ರವಿ : ಅಧ್ಯಕ್ಷರೆ, ಒಂದೇ ಮಾತು, ಇದ್ದವರು ಮೂರು ಜನರಲ್ಲಿ ಕದ್ದವರು ಯಾರು ಎಂದು ಒಂದು ಗಾದೆ ಮಾತಿದೆ! ಆಯ್ಕೆಯಾಗಿರುವುದು ಮೂರು ಪಾರ್ಟಿ. ಕಾಂಗ್ರೆಸ್, ಜನತಾದಳ ಮತ್ತು ಬಿಜೆಪಿ.

ಕೆ.ಪಿ.ಎಸ್.ಸಿ. ಸದಸ್ಯರು ರಾಜಕೀಯ ಪಕ್ಷಗಳಿಗನುಗುಣವಾಗಿ ನೇಮಕವಾಗಿರುವುದು. ಈಗ ನಾವೇ ಸುಧಾರಣೆ ಆಗದೆ ಕೆ.ಪಿ.ಎಸ್.ಸಿ. ಸುಧಾರಣೆ ಆಗುವುದಿಲ್ಲ. ನಾವು ನೇಮಕ ಮಾಡಬೇಕಾದರೆ ಜಾತಿ ಮೇಲೆ ನೇಮಕ ಮಾಡಿದ್ದೇವೆ. ಅವರು ನಮ್ಮ ಮಾತು ಕೇಳುತ್ತಾರೆಂದು ಅವರನ್ನು ನೇಮಕ ಮಾಡಿದ್ದೇವೆ. ಅದರ ಫಲ ನಾವು ಉಣ್ಣುತ್ತಿದ್ದೇವೆ. ಹಾಗಾಗಿ ಆ ವ್ಯವಸ್ಥೆ ಸುಧಾರಣೆ ಆಗಬೇಕು.

(ಗೊಂದಲ)

ಅಧ್ಯಕ್ಷರು : ಆಯಿತು. ಓಕೆ, ಸಾಕು. ಮುಖ್ಯಮಂತ್ರಿಗಳೇ ನೀವು ಉತ್ತರ ಹೇಳಿ.

ಶ್ರೀ ಸಿದ್ದರಾಮಯ್ಯ : ಅವರು ಸುಮ್ಮನಾಗಲಿ. ವೃದ್ಧ ನಾರಿ ಪತಿವ್ರತ, ನೀವು ನೇಮಕ ಮಾಡಿರುವವರೇ ಹಣ ಕೇಳಿರುವುದು. ಆಯಿತು, ಸುಮ್ಮನಿರಿ ರವಿ.

ಶ್ರೀ ಸಿ.ಟಿ. ರವಿ : ಸಂದರ್ಶದಲ್ಲಿ ಅವರು ಏನು ಪ್ರಶ್ನೆ ಕೇಳುತ್ತಾರೆ ಅದಕ್ಕೆ ಅವರು ಏನು ಉತ್ತರ ಕೊಡುತ್ತಾರೆ ಎಂದು ಗೊತ್ತಾಗುವುದಿಲ್ಲ. ಹಾಗಾಗಿ ಇದನ್ನು ಸುಧಾರಣೆ ಮಾಡದಿದ್ದರೆ ಅಂಕಗಳನ್ನು ಕೊಡುವುದಕ್ಕೆ ಸಹ ಅವರ ಮನಸೋ ಇಚ್ಛೆ ಮಾಡುತ್ತಾರೆ. ಇದಕ್ಕೆ ವಿಡಿಯೋಗ್ರಾಫ್ ಮಾಡಬೇಕೆಂದು ಸುಪ್ರೀಂ ಕೋರ್ಟ್ ಆರ್ಡರ್ ಆಗಿದೆ. ಅದನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು. ಇಲ್ಲದಿದ್ದರೆ ಅವರು ಕೇಳುವ ಪ್ರಶ್ನೆಗೂ ಆಯ್ಕೆಗೂ ಸಂಬಂಧವೇ ಇರುವುದಿಲ್ಲ.

ಅಧ್ಯಕ್ಷರು : ಆಯಿತು. ok.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯಬಿ.ಎಸ್. ಯಡಿಯೂರಪ್ಪನವರು ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಇತ್ತೀಚೆಗೆ ನಡೆದ ನೇಮಕಾತಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇತ್ತೀಚೆಗೆ 362 ಹುದ್ದೆಗಳಿಗೆ class-I and class-II, A ಮತ್ತು B ದರ್ಜೆಯ ಹುದ್ದೆಗಳಿಗೆ ಕಳೆದ ತಿಂಗಳು 27ನೇ ತಾರೀಖಿನಂದು ಸಂದರ್ಶನ ಮಾಡಿದ್ದಾರೆ. ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುವಂತಹ ನೇಮಕಾತಿ ಪಟ್ಟಿ ಸರ್ಕಾರಕ್ಕೆ ಇನ್ನೂ ಬಂದಿಲ್ಲ. ಈ ನೇಮಕಾತಿ ಸಂದರ್ಶನ ನಡೆಯುವಾಗ ಪತ್ರಿಕೆಗಳಲ್ಲಿ, ಟಿ.ವಿ. ಮಾಧ್ಯಮಗಳಲ್ಲಿ ಮತ್ತು ಸಾರ್ವಜನಿಕವಾಗಿ KPSCಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆಯೆಂಬ ಸುದ್ದಿಗಳು ಪ್ರಕಟವಾಗಿದೆ.

ಟಿವಿ. ಮಾಧ್ಯಮಗಳಲ್ಲಿ ಈ ಸಂಬಂಧ ಚರ್ಚೆಗಳು ಕೂಡ ಆಗಿದೆ. ಇದು ನಮ್ಮ ಸರ್ಕಾರದ ಗಮನಕ್ಕೂ ಕೂಡ ಬಂದಿದೆ. ಡಾ: ಮೈತ್ರಿ ಎಂಬ ಮಹಿಳೆಯೊಬ್ಬರು ಪರಿಶಿಷ್ಟ ಪಂಗಡಕ್ಕೆ ಸೇರಿದ್ದ ಹೆಣ್ಣುಮಗಳಾಗಿದ್ದು, ಎಂ.ಬಿ.ಬಿ.ಎಸ್, ಎಂ.ಡಿ. ಮಾಡಿದ್ದಾರೆ. ಅವರು ನನಗೂ ಕೂಡ ಇತ್ತೀಚೆಗೆ ದೂರು ಕೊಟ್ಟಿದ್ದಾರೆ. 27ನೇ ತಾರೀಖಿನ ನಂತರ ನೇಮಕಾತಿ ಪ್ರಕ್ರಿಯೆ ಮುಗಿದ ನಂತರ ನನಗೆ ದೂರ ಕೊಟ್ಟಿದ್ದಾರೆ. ಕೆ.ಪಿ.ಎಸ್.ಸಿ.ಯಲ್ಲಿ ನಡೆದಂತ ಲಿಖಿತ ಪರೀಕ್ಷೆಯಲ್ಲಿ ಎಸ್.ಟಿ. ವಿಭಾಗದ ಮಹಿಳೆಯರಲ್ಲಿ ನಾನು 1009 highest marks ಪಡೆದು topper ನಲ್ಲಿದ್ದು, ನನಗಿಂತ ಕೆಳಗಿರುವವರಿಗೆ 937.5 ಅಂಕಗಳು ಬಂದಿದ್ದು, ಅವರನ್ನು ಆಯ್ಕೆ ಮಾಡಿದ್ದಾರೆಂದು ದೂರಿನಲ್ಲಿ ಹೇಳಿದ್ದಾರೆ. 20 Assistant Commissioner post ಗಳಿವೆ. ಅವರನ್ನು ಸೆಲೆಕ್ಟ್ ಮಾಡಿಕೊಳ್ಳುವುದಕ್ಕೆ ನನಗಿಂತ ಹೆಚ್ಚು ಕೊಟ್ಟಿದ್ದಾರೆ. ನನಗೆ 1009 marks ಬಂದಿದ್ದರೂ ಕೂಡ ಲಿಖಿತ ಪರೀಕ್ಷೆಯಲ್ಲಿ ಅವರಿಗಿಂತ 72.5 marks ಹೆಚ್ಚಿಗೆ ಪಡೆದಿದ್ದರೂ ಕೂಡ ಅವರಿಗೆ ಮೌಖಿಕ ಸಂದರ್ಶನದಲ್ಲಿ ಹೆಚ್ಚು ಅಂಕಗಳನ್ನು ಕೊಟ್ಟು ನನಗೆ ಕಡಿಮೆ ಅಂಕಗಳನ್ನು ಕೊಟ್ಟಿರುವುದರಿಂದ ನಾನು Assistant Commissioner ಹುದ್ದೆಯಿಂದ ವಂಚಿತಳಾಗಿದ್ದೇನೆಂದು ಹೇಳಿದ್ದಾರೆ. ಅದಕ್ಕೆ ಇಲ್ಲಿ ಕಾರಣಗಳನ್ನು ಕೊಡುತ್ತಾ ಹೆಸರುಗಳನ್ನೆಲ್ಲಾ ಹೇಳುವುದಿಲ್ಲ. ಯಾರು ಎಷ್ಟು ದುಡ್ಡು ಕೇಳಿದರು, ಯಾರು ಇದನ್ನೆಲ್ಲಾ ಮಾತನಾಡಿದರೆಂದು ಹೇಳಿದ್ದಾರೆ. ಇವರಿಗೆ ಯಾರ್ಯಾರು ಫೋನ್ ಮಾಡಿದ್ದರೆಂದು mobile numberಗಳನ್ನೆಲ್ಲಾ ಕೊಟ್ಟಿದ್ದಾರೆ. ಇವರು KPSC ಕಛೇರಿಗೆ ಹೋಗಿ ಅಲ್ಲಿ members ಭೇಟಿ ಮಾಡಿ ಅವರು ಸುಮಾರು 70–75 ಲಕ್ಷ ರೂಪಾಯಿಗಳನ್ನು ಕೇಳಿದಾಗ ನನಗೆ ಮೆರಿಟ್ ಇದೆ ಅಷ್ಟು ಹಣವನ್ನೆಲ್ಲಾ ನನ್ನಿಂದ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿ ಬಂದಿರುವುದನ್ನೇಲ್ಲ ದೂರಿನಲ್ಲಿ ಬರೆದಿದ್ದಾರೆ. ಇದರಲ್ಲಿ sting operation ಕೂಡ ಆಗಿದೆ. ಮೂರು ಜನ ಅಧಿಕಾರಿಗಳು ಕೂಡ ಏಜೆಂಟ್ ರೀತಿ ಕೆಲಸ ಮಾಡಿ ಅನೇಕ ಜನ memberಗಳಿಗೆ ಆಗಿದೆ. KPSC ಸಂವಿಧಾನಾತ್ಮಕವಾಗಿ ರಚನೆಯಾಗಿರುವಂತಹ ಒಂದು ಸಂಸ್ಥೆಯಾಗಿದ್ದು, ಆ ಸಂಸ್ಥೆಯ ಘನತೆ, ಗೌರವ ಎಲ್ಲವೂ ಕೂಡ ಇದರಿಂದ ಹಾಳಾಗುವ ರೀತಿಯಲ್ಲಿ ಸಾರ್ವಜನಿಕವಾಗಿ ಚರ್ಚೆಯಾಗುತ್ತಿದೆ. ಇದು ಸಂವಿಧಾನಾತ್ಮಕವಾದ ಸಂಸ್ಥೆಯಾಗಿರುವುದರಿಂದ

Advocate General–ರವರಿಗೆ ಕೂಡ opinion ತೆಗೆದುಕೊಂಡಿದ್ದೇನೆ. ಅವರ opinion ತೆಗೆದುಕೊಂಡು ನಾವೇನು ಮಾಡಬಹುದು ಎಂಬ ಬಗ್ಗೆ ಕೂಡ ವಿಚಾರ ಮಾಡಿ, ಈಗ ಅದನ್ನು ತನಿಖೆ ಮಾಡಿಸಬೇಕೆಂದು ಸರ್ಕಾರ ವಿಚಾರ ಮಾಡುತ್ತಿದೆ. ಒಂದು ಸೂಕ್ತ ತನಿಖಾ ಸಂಸ್ಥೆಯಿಂದ ತನಿಖೆ ಮಾಡಿಸಬೇಕು, ಆ ತನಿಖಾ ವರದಿ ಮೇಲೆ ಕಾನೂನು ರೀತಿಯ ಸಂವಿಧಾನಾತ್ಮಕವಾಗಿ ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೋ ಅದನ್ನು ತೆಗೆದುಕೊಳ್ಳಬೇಕೆಂಬುದು ಒಂದು ನಿರ್ಧಾರ. ಬಹುಶಃ ಒಂದು ಅಥವಾ ಎರಡು ದಿನಗಳಲ್ಲಿ ತನಿಖೆಯನ್ನು ಯಾರಿಂದ ಮಾಡಿಸಬೇಕೆಂದು ತೀರ್ಮಾನ ಮಾಡುತ್ತೇವೆ. ಎರಡು ಅಥವಾ ಮೂರು ವಾರಗಳಲ್ಲಿ ವರದಿಯನ್ನು ಕೊಡಬೇಕು. ವರದಿ ಬಂದ ನಂತರ ಅದರ ಆಧಾರದ ಮೇಲೆ ಸರ್ಕಾರಕ್ಕಿರುವಂತಹ ಅಧಿಕಾರವನ್ನು ಚಲಾಯಿಸಿ ಯಾವ ರೀತಿ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂಬ ವ್ಯವಸ್ಥೆಯನ್ನು ಮಾಡುತ್ತೇವೆ ಇದು ಒಂದು. ಒಂದು ವೇಳೆ ಈ ಆರೋಪಗಳು ಸಾಬೀತಾದರೆ ಸರ್ಕಾರ ಕಠಿಣವಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತದೆ. in the meanwhile, ನಮಗಿನ್ನೂ ಅವರು list ಕಳುಹಿಸಿಲ್ಲ. ಆ list ಅನ್ನು withhold ಮಾಡುತ್ತೇವೆ. ಅಲ್ಲಿಯವರೆಗೆ ನಾವು ಆ listಗೆ ಒಪ್ಪಿಗೆಯನ್ನು ಕೊಡುವುದಿಲ್ಲ. withhold ಮಾಡಿ ತನಿಖೆಯಾದ ನಂತರ ಕ್ರಮ ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡುತ್ತೇವೆ. ದೂರು ಕೊಟ್ಟಿರುವ ಹೆಣ್ಣುಮಗಳಿಗಾದ ರೀತಿ ಬೇರೆ ಯಾರಿಗಾದರೂ ಅನ್ಯಾಯಗಳಾಗಿದ್ದರೆ ಅದನ್ನು ಸರಿಪಡಿಸುವ ಕೆಲಸವನ್ನು ಸರ್ಕಾರ ಮಾಡುತ್ತದೆಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇದರಲ್ಲಿ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಇನ್ನೊಂದನ್ನು ಪ್ರಸ್ತಾಪ ಮಾಡಿದ್ದಾರೆ. ಸಿ.ಓ.ಡಿ. enquiryಇದೆಲ್ಲಾ ನ್ಯಾಯಾಲಯದ ಮುಂದೆ ಇದೆ. ಇವತ್ತು case ಬಂದಿತ್ತು. ಸರ್ಕಾರದ ನಿಲುವು ಏನೆಂದು ನಾವು ಹೇಳಬೇಕಗುತ್ತದೆ. Written examinations ಮಾಡುವುದು ಕಾರ್ಯದರ್ಶಿಗಳ ಕೆಲಸ. Written examinations ಮಾಡಿದ ನಂತರ ಸಂದರ್ಶನ ಮಾಡುವುದು chairmanಮತ್ತು members. ಇದೆಲ್ಲಾ ನಡೆಯುವುದು ಸಂದರ್ಶನದ ಹಂತದಲ್ಲಿ. ಸಂದರ್ಶನವಾದ ನಂತರ marks announce ಮಾಡುತ್ತಾರೆ. ಈ marks announce

ಮಾಡುತ್ತಿರುವುದರಿಂದ ತೊಂದರೆಯೇನಾಗುತ್ತಿದೆಯೆಂದರೆ ಈ marks ನೋಡಿಕೊಳ್ಳುತ್ತಾರೆ, interview ಗೆ 200 marks ಇದ್ದು, ಕನಿಷ್ಠ 50 ಅಂಕಗಳನ್ನು ಕೊಡುತ್ತಾರೆ. 150 maximum ಕೊಡುತ್ತಾರೆ. 100marks ಒಳಗಡೆ ಯಾರನ್ನು ಮೇಲಕ್ಕೆ ತರಬೇಕು, ಯಾರನ್ನು selectಮಾಡಬೇಕೆಂದು manipulate ಮಾಡುವುದಕ್ಕೆ ಶುರು ಮಾಡುತ್ತಾರೆ. ಏರಿಸುವ ಇಳಿಸುವಂತಹ ಏಣಿ ಆಟದ ಕೆಲಸ ಇಲ್ಲಿ ನಡೆಯುತ್ತಿದೆ. ಇದು ಬಹಳಷ್ಟು ಸದಸ್ಯರುಗಳಿಗೆ ತಿಳಿದಿರುವ ವಿಚಾರವಾಗಿದೆ. ಆರೋಪಗಳೆಲ್ಲಾ ಸತ್ಯಕ್ಕೆ ದೂರವಾದವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ರಾಮನಗರ) :– ಈಗ manipulate ಮಾಡುತ್ತಾರೆಂಬ ಒಂದು ಪದವನ್ನು ಬಳಸಿದ್ದೀರಿ. Member ಗಳಿಗೂ ನಮ್ಮಂತಹ ಹಲವಾರು ಜನ influence ಮಾಡಿರುತ್ತೇವೆ. ಹಾಗದರೆ ನಾವೆಲ್ಲಾ ಹಣವನ್ನು ತೆಗೆದುಕೊಂಡು ಮಾಡಿರುತ್ತೇವೆಯೇ? ಇಲ್ಲಿ manipulate ಇರುವುದು 50 marks ನಿಂದ 150 ನಲ್ಲಿ ಏನು ಮಾಡುತ್ತಾರೆ ಆ ಸಮಯದಲ್ಲಿ ನಮ್ಮ constituency ಯಿಂದ ಯಾರೋ ಬಂದಿರುತ್ತಾರೆ ನಾವು ಅನುಕೂಲ ಮಾಡಿಕೊಡುವುದಕ್ಕೆ ಹೇಳಿರುತ್ತೇವೆ. ಇಲ್ಲಿರುವಂತಹ ಹಲವಾರು ಜನ ಆತ್ಮ ಮುಟ್ಟಿ ಹೇಳಿಕೊಳ್ಳಬೇಕು. ಇವತ್ತು ಎಷ್ಟು ಜನ ಇಲ್ಲಿಲ್ಲ? ಇದರಿಂದ manipulation ಎನ್ನುವಂತಹದು ಏನಿದೆ ಇದನ್ನು ಹಣವನ್ನು ತೆಗೆದುಕೊಂಡು ಎಲ್ಲರೂ ಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಯಾವುದೋ constituency ಹುಡುಗರು ಬಂದಿರುತ್ತಾರೆಂದು ನಾವು influence ಮಾಡಿರುತ್ತೇವೆ. ಇಲ್ಲಿರುವ ಹಲವಾರು ಜನ ಕೆಲಸಗಳನ್ನು ಕೊಡಿಸಿರುತ್ತೀರಿ. ಇಲ್ಲಿರುವಂತಹ ಶ್ರೀ ಜಗದೀಶ್ ಶೆಟ್ಟರ ರವರಿಗೂ ಕೂಡ ಇದರ ಅನುಭವವಿದೆ. ಅವರ ಅಧ್ಯಕ್ಷರನ್ನು ಕರೆದುಕೊಂಡು ಹೋಗಿದ್ದಾಗ ಒಂದು ಬಾರಿ ನಡೆದ ಘಟನೆಯಿದೆ. ನನಗದು ಗೊತ್ತಿದೆ. ಇಲ್ಲಿರುವ ಪ್ರಶ್ನೆಯೆಂದರೆ ನೀವು ತನಿಖೆ ನಡೆಸಿ ಯಾರು ತಪಿತಸ್ಥರಿದ್ದಾರೆ ಅವರನ್ನು hang ಮಾಡಿ. ಇದರಲ್ಲಿ ಎರಡು ಮಾತೇ ಇಲ್ಲ. ಇದು ತನಿಖೆಯಾಗಲೇಬೇಕು. ಇವತ್ತು ಅನ್ಯಾಯವಾಗಿರುವ ವಿಷಯದಲ್ಲಿ ಸರಿಪಡಿಸಲಿಕ್ಕೆ ತನಿಖೆಯಾಗಬೇಕಾಗಿರುವುದು ಅತ್ಯವಶ್ಯಕ. ಈಗಾಗಲೇ ಯಾವುದೋ ಒಂದು report ಅನ್ನು CODಯವರೆ

ಕೊಟ್ಟಿದ್ದಾರೆಂದು ಬರೆದರು. Exam ಬರೆಯದೇ Gazetted Officer ಆಗಿ appoint ಆಗಿ ಕೆಲಸ ಮಾಡುತ್ತಿದ್ದಾರೆಂದರೆ ಆ ಸಂಸ್ಥೆ ಬಗ್ಗೆ ಏನು ಗೌರವ ಸಿಕ್ಕಿದ ಹಾಗೆ ಆಗುತ್ತದೆ? ಇದೇನೋ ನನಗೆ ಗೊತ್ತಿಲ್ಲ. ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. Court ನಲ್ಲಿ case ಇರಲಿ. ಈಗ ಗೆಜೆಟೆಡ್ ಆಫೀಸರ್ ಯಾರು ಎಂಬುದನ್ನು ನ್ಯಾಯಾಲದಲ್ಲಿ ಕೊಟ್ಟಿದ್ದರೆ ಗೆಜೆಟೆಡ್ ಆಫೀಸರ್ ಅನ್ನು arrest ಮಾಡಬೇಕಲ್ಲವೇ? Exam ಬರೆಯದೆ appoint ಆಗುತ್ತಾನೆಂದರೆ ಹೇಗೆ? ನನಗೂ ಕೂಡ ಅಲ್ಲಿ ಏನೇನು ನಡೆದಿದೆಯೆಂದು ಗೊತ್ತಿದೆ. ತನಿಖೆಯನ್ನು ಯಾವ ರೀತಿ ನಡೆಸಿಕೊಂಡು ಬಂದಿದ್ದಾರೆಂಬ ಬಗ್ಗೆ ಕೂಡ ಗೊತ್ತಿದೆ. ಆದರೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಗೆಜೆಟೆಡ್ ಆಫೀಸರ್ exam ಗೆ ಅರ್ಜಿಯನ್ನು ಹಾಕದೆ interview attend ಮಾಡದೆ ಅವರನ್ನು ಸೆಲೆಕ್ಟ್ ಮಾಡಿದ್ದಾರೆಂದರೆ ಏನರ್ಥ. ಅಧಿಕಾರಿ ಯಾರಿದ್ದಾರೆ ಅವನು ಇವತ್ತು ಕೆಲಸದಲ್ಲಿದ್ದಾನೆ. ಅವನನ್ನು ಕಂಡುಹಿಡಿದು ತಕ್ಷಣ arrest ಮಾಡಬೇಕಲ್ಲವೇ?

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) :– ಮಾನ್ಯ ಅಧ್ಯಕ್ಷರೆ, ಆ ರೀತಿ ಯಾರಾದರೂ ಇದ್ದರೆ ಅವರನ್ನು arrest ಮಾಡಲೇಬೇಕು. ಅವನಿಗೆ ಶಿಕ್ಷೆಯಾಗಲೇಬೇಕಾಗಿದೆ. ಒಂದು ವೇಳೆ ಆ ರೀತಿಯಾದ ಆರೋಪವೇನೂ ಇಲ್ಲದೆ mediaದವರು ಲಾಠಿ ಚಾರ್ಜ್ ಮಾಡಿದ್ದರೆ ಅವರನ್ನೇನು ಮಾಡುವುದು? media ದವರನ್ನು ಏನು ಮಾಡುವುದು? ನಮಗೆ ಅಧಿಕಾರವೇ ಇಲ್ಲವಲ್ಲ! ಮೀಡಿಯಾದವರು ಬೇಸಿಸ್ ಇಲ್ಲದೇ ಬರೆದಿದ್ದರೆ, ಆ reporter ನ್ನು ಏನು ಮಾಡುವುದು? ಅನೇಕ ಸಲ ಈ ರೀತಿ ಬರೆಯುತ್ತಾರೆ. ಪಾಪ ಅವರಿಗೆ ಯಾವುದೇ ಅಡ್ಡಿಯಿರುವುದಿಲ್ಲ! ಅದಕ್ಕೆ ನಾನು ಲಾಠಿ ಚಾರ್ಜ್ ಎಂದು ಹೇಳುತ್ತಿರುವುದು! Many of us are victims.

ಶ್ರೀ ಸಿ.ಟಿ. ರವಿ : ಅದಕ್ಕಾಗಿಯೇ ನದಿ ಮೂಲ, ಋಷಿ ಮೂಲವನ್ನು ಕೆಣಕಬಾರದು!

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ರಾಮನಗರ) : ಈ ರೀತಿ ಬರೆಯುವ ವರದಿಗಳಿಗೆ ಕಾನೂನಿನ ಕ್ರಮ ತೆಗೆದುಕೊಳ್ಳುವ ವಾತಾವರಣ createಆಗಬೇಕು. ಹೊಸ ಕಾನೂನು ತರಬೇಕಾಗುತ್ತದೆ. ಇಲ್ಲದಿದ್ದರೆ

ತಪ್ಪಿತಸ್ಥರಲ್ಲದಿದ್ದರೂ ತಪ್ಪಿತಸ್ಥರಾಗಿ ಜನಗಳಿಗೆ ಅನುಮಾನಕ್ಕೆ ಎಡೆ ಮಾಡಿ ಕೊಡುತ್ತದೆ. ಒಳ್ಳೆಯ ಕೆಲಸ ಮಾಡುವಂತಹ ಹಲವಾರು ಜನಗಳಿಗೆ ಪೆಟ್ಟು ಬೀಳುವಂತಹ ಕೆಲಸವಾಗಬಾರದು.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರೆ, manipulation ಮಾಡುತ್ತಿದ್ದಾರೆಂದು ಏತಕ್ಕೆ ಹೇಳಿದೆಯೆಂದರೆ, ಇದೆಲ್ಲವೂ ನಿಜ, ನಾವೂ–ನೀವೂ ಇಬ್ಬರೂ ಹೇಳಿದ್ದೇವೆ. ಯಾರೋ ಬಂದಿರುತ್ತಾರೆ, ಹೇಳಿರುತ್ತೇವೆ, ಅದು ನಿಜ. ಹಾಗೆಂದು ಮೆರಿಟ್ ಇರುವವರಿಗೆ ಅನ್ಯಾಯ ಮಾಡಿ, ಅದರ ಕೆಳಗಿರುವವರಿಗೆ ಸಹಾಯ ಮಾಡಿ ಎಂದು ಹೇಳುತ್ತಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ನಾವು ಹೇಳಿದ ಮೇಲೆ ಸಹಾಯ ಮಾಡಲೇಬೇಕಾಗುತ್ತದೆ ಅಲ್ಲವೇ?

ಶ್ರೀ ಸಿದ್ದರಾಮಯ್ಯ : ಹಾಗಾದರೆ ಕಂಪ್ಲೆಂಟ್ ಕೊಟ್ಟಿರುವ ಮೈತ್ರಿಯವರಿಗೆ,

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ನಾನು ನಿಮಗೆ ಹೇಳುವುದೇನೆಂದರೆ ಅಲ್ಲಿ ಪ್ರಶ್ನೆ ಬರುವುದು, ಅವರೇನಾದರೂ 70 ಲಕ್ಷ ಅಥವಾ , 80 ಲಕ್ಷ ರೂಪಾಯಿ ದುಡ್ಡು ಕೇಳಿದ್ದರೆ ಅದು ಕಾನೂನು ಬಾಹಿರ. ಅದರ ಬಗ್ಗೆ action ತೆಗೆದುಕೊಳ್ಳಿ.– ಆದರೆ manipulation ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವೇ ಅದೇಶ ನೀಡಿದ್ದು, ಏನು 12.5% fix ಮಾಡಿದ್ದಾರೋ ಆ ಬಗ್ಗೆ membersಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವೇ prerogative powers ಕೊಟ್ಟಿದ್ದಾರೆ. ಆ ಸದಸ್ಯರುಗಳು ಅದರಲ್ಲಿ ಅವ್ಯವಹಾರ ಮಾಡಿಕೊಂಡಿದ್ದರೆ ಅದು ಕಾನೂನು ಬಾಹಿರವಾಗಿದ್ದು, ಆಗ ಅವರನ್ನು ಶಿಕ್ಷೆಗೆ ಒಳಪಡಿಸಬೇಕು. ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲಿ.

ಶ್ರೀ ಸಿದ್ದರಾಮಯ್ಯ : ನಾವು manipulate ಮಾಡುವುದನ್ನು ಸಮರ್ಥಿಸುವುದಕ್ಕಾಗುವುದಿಲ್ಲ, ಆ ರೀತಿ ಮಾಡಿ ಎಂದು ಸಹ ಹೇಳುವುದ–ಕ್ಕಾಗುವುದಿಲ್ಲ. ನಮಗೆ ಯಾರೋ ಬಂದು ಹೇಳಿದ್ದು, ನಾವು ಆ ರೀತಿ ಹೇಳಿರುತ್ತೇವೆ. ಹಾಗೆಂದು ಮೆರಿಟ್ ಇದ್ದವರಿಗೆ, 1050 ಅಂಕಗಳನ್ನು

ತೆಗೆದುಕೊಂಡಿರುವವರನ್ನು ಬಿಟ್ಟು 950 ಅಂಕ ಪಡೆದಿರುವವರಿಗೆ ಕೊಡಿ ಎಂದ ಹೇಳುವುದಕ್ಕಾಗುದಿಲ್ಲ.

ಡಾ: ಹೆಚ್.ಸಿ. ಮಹದೇವಪ್ಪ : Discretionary powers ಅನ್ನು judiciousಆಗಿ use ಮಾಡಿ.

ಶ್ರೀ ಸಿದ್ದರಾಮಯ್ಯ :Oral interview ಎಂದು ಹೇಳಿದರೆ...

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಹಾಗಾದರೆ ಬಹಳಷ್ಟು ಜನರನ್ನು ವಾಪಸ್ಸು ಕಳುಹಿಸಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಹಾಗಾದರೆ ಪರೀಕ್ಷೆಯನ್ನೇ ಮಾಡುವುದು ಬೇಡ!...

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಲೋಪದೋಷಗಳು ಏನು ಇವೆ ಎಂಬುದು ಅನುಭವ ಆಗಿದೆ. ಅದನ್ನು ಸರಿಪಡಿಸಿಕೊಳ್ಳಿ. ಕಳೆದ 50 ವರ್ಷಗಳಿಂದಲೂ manipulation ಸಮಸ್ಯೆ ನಡೆದುಕೊಂಡೇ ಬರುತ್ತಿದೆ. ನಿನ್ನೆ, ಮೊನ್ನೆ ಬಂದಿರುವುದಲ್ಲ.

ಶ್ರೀ ಸಿದ್ದರಾಮಯ್ಯ : ನಾನು ಹೇಳುತ್ತಿರುವುದೇನೆಂದರೆ, ಇದನ್ನು ಒಂದು ಪದ್ಧತಿಯಲ್ಲಿ ವಮಾಡುತ್ತಿದ್ದಾರೆ. Class-1, class–2 ಗೆ ಒಂದು ಪರೀಕ್ಷೆಯನ್ನು ಮಾಡುತ್ತಾರೆ. ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಹಾಜರಾಗಿ ಪರೀಕ್ಷೆಯನ್ನು ಬರೆಯುತ್ತಾರೆ. ನಂತರ valuation ಆಗುತ್ತದೆ, ಆಮೇಲೆ marks announce ಮಾಡುತ್ತಾರೆ. ನಂತರ 200 ಅಂಕಗಳಿಗೆ interview ಮಾಡುವುದು ಒಂದು. Manipulation ಮಾಡುವುದುಕ್ಕೆ ಸಾಧ್ಯವೆಂದು ಏಕೆ ಹೇಳಿದೆಯೆಂದರೆ, 200 ಅಂಕಗಳಲ್ಲಿ 100 ಅಂಕಗಳ ವ್ಯತ್ಯಾಸದಲ್ಲಿ, ಕನಿಷ್ಠ 50, ಗರಿಷ್ಠ 150 ಅಂಕಗಳನ್ನು ಕೊಡುತ್ತಾರೆ. ಈ ಹಿಂದೆ 195 ಅಂಕಗಳವರೆಗೆ ಕೊಟ್ಟಿದ್ದಾರೆ. 200 ಅಂಕಗಳವರೆಗೂ ಕೊಡುತ್ತಿದ್ದರು. ಅದು ಅವರ discretion. ವ್ಯಕ್ತಿತ್ವದ ಪರೀಕ್ಷೆ ಮಾಡುವಾಗ, ವ್ಯಕ್ತತ್ವದ ಆಧಾರದ ಮೇಲೆ ಸ್ವಲ್ಪ ಹೆಚ್ಚು ಕಡಿಮೆ ಯಾದರೆ I can understand ಆದರೆ ಈ ರೀತಿಯಾಗಿ ಮೇಲ್ನೋಟಕ್ಕೆ ಅನ್ಯಾಯವಾಗುವ ರೀತಿಯಲ್ಲಿ ಕಂಡರೆ, ನ್ಯಾಯವಾಗಿರುವುದು ಅನ್ಯಾಯವಾಗುತ್ತಿದೆ ಎನ್ನುವುದು ಬಹಳ ಸ್ಪಷ್ಟವಾಗಿ ಕಾಣುತ್ತದೆ. ಡಾ. ಮೈತ್ರಿ ಅವರು ಹೇಳಿರುವ ಪ್ರಕಾರ, ಯಾರ್ಯಾರು ದುಡ್ಡು ಕೇಳಿದರು, ಅವರ

ನಂಬರ್‌ಗಳೇನು ಎನ್ನುವುದನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ತನಿಖೆ ಮಾಡಿಸಬೇಕಾಗಿರುವುದರಿಂದ I am not going to disclose all those things. ಮಾನ್ಯ ಯಡಿಯೂರಪ್ಪ ಅವರೆ, ನಮಗೆ ಬರೆದಿರುವಂತಹ ಪತ್ರದಲ್ಲಿ ಎಲ್ಲವನ್ನೂ ಹೇಳಿದ್ದಾರೆ. ಆದರೆ ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಎರಡು ಸಾರಿ Public Service Commissionಗೆ ಕರೆದು ಸದಸ್ಯರೊಬ್ಬರನ್ನು ಭೇಟಿ ಮಾಡಿ, ಅವರ PAಯನ್ನು ಭೇಟಿ ಮಾಡಿ, ಎಷ್ಟು ದುಡ್ಡು ಕೇಳಿದರು, ಎಷ್ಟೆಷ್ಟು ಸಾರಿ ಕೇಳಿದರು, ನೀವು ದುಡ್ಡು ಕೊಡದೇ ಹೋದರೆ ನಿಮಗೆ ಈ ಕೆಲಸ ಸಿಗುವುದಿಲ್ಲ, highest number ತೆಗೆದುಕೊಂಡಿದ್ದರೂ ಸಹ ನಿಮಗೆ ಈ ಕೆಲಸ ಸಿಗುವುದಿಲ್ಲ. ಬೇರೆಯವರಿಗೆ ಸಿಗುತ್ತದೆ ಎಂದು ಹೇಳಿರುವುದನ್ನೆಲ್ಲಾ ಪತ್ರದಲ್ಲಿ ಬರೆದಿದ್ದಾರೆ. ಇದು ತನಿಖೆಯಾಗಬೇಕಲ್ಲವೇ ಮಾನ್ಯ ಅಧ್ಯಕ್ಷರೆ? ಆದ್ದರಿಂದ ಕೂಲಂಕುಷವಾಗಿ ತನಿಖೆ ನಡೆಸಿ ವರದಿ ಬರಲಿ. ಅಲ್ಲಿಯವರೆಗೆ ಆ ಪಟ್ಟಿಯನ್ನು ಪ್ರಕಟಣೆ ಮಾಡಲ್ಲ, ತಡೆಹಿಡಿಯುತ್ತೇವೆ. ಎರಡನೆಯದಾಗಿ ಸೂಕ್ತ ತನಿಖಾ ಸಂಸ್ಥೆಯಿಂದ ತನಿಖೆ ಮಾಡಿಸುತ್ತೇವೆ. ಮೂರನೆಯದಾಗಿ Union Public Service Commission ನಲ್ಲಿ ಒಂದು ಪದ್ಧತಿಯಿದ್ದು, ಅದನ್ನೂ ಸಹ ತರಿಸುವುದಕ್ಕೆ ಹೇಳಿದ್ದೇನೆ. ಅಲ್ಲಿ ಯಾವ ರೀತಿ ಸಂದರ್ಶನ ಮಾಡುತ್ತಿದ್ದಾರೆ, ಅಲ್ಲಿ ಪರೀಕ್ಷೆಯಾದ ನಂತರ marks ನ್ನು announce ಮಾಡುವುದಿಲ್ಲ. Including Chairman, Secretary and Memberಯಾರಿಗೂ ಸಹ marksಗೊತ್ತಾಗುವುದಿಲ್ಲ. Interviewಆದಮೇಲೆ marksಗೊತ್ತಾಗುತ್ತದೆ. ಹಾಗಾಗಿmanipulation ತಡೆಯುವುದಕ್ಕೆ ಸಾಧ್ಯವಾಗುತ್ತದೆ. ಆ ಕಾರಣದಿಂದ central government UPSC ನಲ್ಲಿ ಯಾವ ರೀತಿಯ ಪದ್ಧತಿಗಳಿವೆ, ನಮ್ಮ ನಿಯಮಾವಳಿಗಳಲ್ಲಿ ಏನನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಹೀಗೆ ಎಲ್ಲವನ್ನೂ ಮಾಡಿ ಸಾಧ್ಯವಾದ ಮಟ್ಟಿಗೆ ಅನ್ಯಾಯವನ್ನು ತಡೆಗಟ್ಟುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ ಎನ್ನುವ ಮಾತನ್ನು ತಮ್ಮ ಮೂಲಕ ಸದನಕ್ಕೆ ತಿಳಿಸಬಯಸುತ್ತೇನೆ.

ಅಧ್ಯಕ್ಷರು : ಆಯಿತು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಈಗ 1.30 ಗಂಟೆಯಾಗಿರುವುದರಿಂದ ಅಪೀಲ್ ಮಾಡಿಕೊಳ್ಳುವುದೇನೆಂದರೆ ತಾವು ಡಯಾಬಿಟಿಕ್ ಪೇಷೆಂಟ್ ಆಗಿರುವುದರಿಂದ, ವಿಶ್ವಾಸಸ್ಥರು, ಅಧ್ಯಕ್ಷ ಪೀಠದಲ್ಲಿ ತಾವು ಕೋಮಲ ಹೃದಯದಿಂದ ನಗು ನಗುತ್ತಾ ಇದ್ದರೆ ನಮಗೆ ಮಾತನಾಡುವುದಕ್ಕೆ ಚೆನ್ನಾಗಿರುತ್ತದೆ.

ಅಧ್ಯಕ್ಷರು : ಆ ರೀತಿ ತೊಂದರೆಯೇನಿಲ್ಲ, ನೀವು ಮಾತನಾಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ :Lunch time ಎಂದು ಹೇಳಿ ಎಲ್ಲವನ್ನೂ ಪ್ಯಾಕ್ ಮಾಡಿದ್ದೇನೆ. Lunchಮುಗಿಸಿದ ಮೇಲೆ ಮಾತನಾಡಬಹುದಲ್ಲವೇ?

ಅಧ್ಯಕ್ಷರು : ನಿಮ್ಮ ಮಾತನ್ನು ಕೇಳುವುದಕ್ಕೆ ಮಾನ್ಯ ಸದಸ್ಯರೆಲ್ಲರೂ ಬಹಳ ಕುತೂಹಲದಿಂದ ಇದ್ದಾರೆ. ಪ್ರಾರಂಭ ಮಾಡಿ.

6. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾಪದ ಮೇಲೆ ಚರ್ಚೆ

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ಬಹಳ ಒಳ್ಳೆಯ ವಿಚಾರ discussionಆದ ಮೇಲೆ ನನಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಿದೆ. ಕೆ.ಪಿ.ಎಸ್.ಸಿ. manipulation, discretion ಇವುಗಳೆಲ್ಲಾ ಆದ ಮೇಲೆ ನನ್ನ turn ಬಂದಿದೆ. ಇದರ ಅರ್ಥವೇನೆಂದರೆ ಯಾರಿಗೆ ಯಾವಾಗ ಯಾವ ಅವಕಾಶ ಸಿಗಬೇಕೋ, ಅದು ಸಿಗದೇ ಹೋದಾಗ ಅದೇ manipulation. The process of public life ಹೀಗೆಯೇ. ಈಗ ತಾವು ಅಲ್ಲಿ ಕುಳಿತಿದ್ದೀರಿ. ಅದು manipulationಅಲ್ಲವೇ?

ಅಧ್ಯಕ್ಷರು : ಇಲ್ಲ. ಹಾಗೆಲ್ಲಾ ಹೇಳಬಾರದು.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) : I am glad. ಆ ಚೇರ್ ಅನ್ನು ನಾವು ಹಾಗೆಲ್ಲ derogate ಮಾಡುವುದಕ್ಕೆ ಬರುವುದಿಲ್ಲ. ಅಧ್ಯಕ್ಷರೆ, ಮಾನ್ಯ ರಾಜ್ಯ ಪಾಲರ ಭಾಷಣಕ್ಕೆ ವಂದನೆ ಸೂಚಿಸುವಂತಹ ನಿರ್ಣಯವನ್ನು ಸದನದಲ್ಲಿ ಮಂಡಿಸುವಂತಹದು ನಮಗೆ House of Commonsನಿಂದ ಬಂದಿದು. Mr.Fredrick Whiteಎನ್ನುವವರು ಬಹಳ efficient parliamentary secretary ಆಗಿದ್ದವರು. ಅವರು ನಮ್ಮ